	ತಾಲ್ಲೂಕು	ಕೃಷಿ ವಿಸ್ತರಣಾ ಯೋಜನೆಯಲ್ಲಿ	ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ
೧)	ಕೋಲಾರ	೯	೨
೨)	ಮುಳಬಾಗಿಲು	೧೨	—
೩)	ಮಾಲೂರು	೨೫	—
೪)	ಬಂಗಾರಪೇಟೆ	೭	೩
೫)	ಶ್ರೀನಿವಾಸಪುರ	೨೫	—
೬)	ಚಿಂತಾಮಣಿ	೨೫	—
೭)	ಗೌರಿಬಿದನೂರು	೭	೧
೮)	ಗುಡಿಬಂಡೆ	೬	—
೯)	ಬಾಗೇಪಲ್ಲಿ	೧೬	೧
೧೦)	ಚಿಕ್ಕಬಳ್ಳಾಪುರ	೨	—
೧೧)	ಶಿಡ್ಲಘಟ್ಟ	೨೦	—
	ಒಟ್ಟು	೧೫೪	೭ — ೧೬೧

ಆ)	ತಾಲ್ಲೂಕು	ಪೂರೈಸಿರುವುದು	ಅಪೂರ್ಣ (ನಿರ್ಮಾಣ ಹಂತದಲ್ಲಿರುವುವು)	ಕೈಬಿಟ್ಟವುಗಳು
೧)	ಕೋಲಾರ	೮	೨	೧
೨)	ಮುಳಬಾಗಿಲು	೧೧	—	೧
೩)	ಮಾಲೂರು	೨೦	೫	—
೪)	ಬಂಗಾರಪೇಟೆ	೭	೩	—
೫)	ಶ್ರೀನಿವಾಸಪುರ	೨೨	೨	೧
೬)	ಚಿಂತಾಮಣಿ	೨೩	೧	೧
೭)	ಶಿಡ್ಲಘಟ್ಟ	೧೮	೨	—
೮)	ಗೌರಿಬಿದನೂರು	೭	೧	(ಟೆಂಡರಾಗಿದೆ)
೯)	ಗುಡಿಬಂಡೆ	೪	೨	—
೧೦)	ಬಾಗೇಪಲ್ಲಿ	೧೫	೨	—
೧೧)	ಚಿಕ್ಕಬಳ್ಳಾಪುರ	೨	—	—
	ಒಟ್ಟು	೧೫೭	೨೦	೪

ಇ) ಮತ್ತು ಈ) ಒಟ್ಟು ಮಂಜೂರಾದ ೧೬೧ ಮನೆಗಳ ಕಾಮಗಾರಿಗಳಲ್ಲಿ ೧೫೭ ಮನೆಗಳ ಕೆಲಸವು ಪೂರ್ಣಗೊಂಡಿದ್ದು, ಕಟ್ಟಬೇಕಾಗಿ ಉಳಿದಿರುವ ೨೦ ಮನೆಗಳ ಕೆಲಸವು ವಿವಿಧ ಹಂತಗಳಲ್ಲಿ ನಡೆಯುತ್ತಿದೆ.

ವಿಶ್ವೇಶ್ವರಯ್ಯ ನಾಲ ಸಂಪರ್ಕ ಕಾಲುವೆಯ ಕಾಮಗಾರಿ ಕೆಲಸದ ಕುರಿತಂ

೧೫೬೪(೨೭೬೪) ಶ್ರೀ ಕೆ. ಜೆ. ರಾಮಸ್ವಾಮಿ (ಬನ್ನೂರು).—ಮಾನ್ಯ ಕುಂದಾಯ ಯೋಜನೆ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ವಿಶ್ವೇಶ್ವರಯ್ಯ ನಾಲಾ ಸಂಪರ್ಕ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಸದರಿ ಕಾಮಗಾರಿಗೆ ಈವರೆವಿಗೆ ಒದಗಿಸಲಾಗಿರುವ ಹಣವೆಷ್ಟು ?

ಇ) ಈ ಕಾಮಗಾರಿಯು ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಪ್ರಗತಿಯ ವಿವಿಧ ಹಂತದಲ್ಲಿದೆ.

ಆ) ೨೫೯.೨೦ ಲಕ್ಷ ರೂ ಗಳು

ಇ) ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ೧೯೯೩-೯೪ರಲ್ಲಿ ಪೂರ್ತಿಗೊಳಿಸುವ ಕಾರ್ಯಕ್ರಮ ಇದೆ.

ಶಿಕ್ಷಕರ ನೇಮಕದ ಬಗ್ಗೆ ಸರ್ಕಾರದ ನಿಲುವು

೧೩೬೫(೨೭೬೪) ಶ್ರೀ ಕೆ. ಜೆ. ರಾಮಸ್ವಾಮಿ (ಬನ್ನೂರು).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮಂಡ್ಯ ಜಿಲ್ಲೆಯಲ್ಲಿರುವ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ನೇಮಕಾತಿ ಬಗ್ಗೆ ವಿಭಾಗ ಮಟ್ಟದ ನೇಮಕಾತಿ ಸಮಿತಿಗಳು ಅಸ್ತಿತ್ವದಲ್ಲಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಕೈಗೊಂಡ ಕ್ರಮ ವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೨೨.

ಆ) ಹೌದು.

ಇ) ವಿಭಾಗ ಮಟ್ಟದ ನೇಮಕಾತಿ ಸಮಿತಿಗಳಿಂದ ಖಾಲಿ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು ಖಾಲಿ ಹುದ್ದೆಗಳನ್ನು ಸಧ್ಯದಲ್ಲಿಯೇ ಭರ್ತಿ ಮಾಡಲಾಗುತ್ತದೆ.

ನೀರು ಸರಬರಾಜು

೧೩೬೬(೨೭೬೦) ಶ್ರೀ ಕೆ. ಜೆ. ರಾಮಸ್ವಾಮಿ (ಬನ್ನೂರು).—ಮಾನ್ಯ ಕಂದಾಯ ಯೋಜನೆ, ಭಾರಿ, ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಿ. ಡಿ. ಎಸ್. ಬಡವಣಾ ನಾಲ ಮತ್ತು ರಾಮಸ್ವಾಮಿ ನಾಲಾ ಕೊನೆ ಹಂತದ ಜಮೀನು ಗಳಿಗೆ ನಾಲ್ಕು ವರ್ಷಗಳಿಂದ ನೀರು ಸರಬರಾಜು ಆಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ.—

ಆ) ಹಾಗಿದ್ದಲ್ಲಿ ಸದರಿ ನಾಲಾಗಳಲ್ಲಿ ನೀರು ಸರಬರಾಜು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ನೀರು ಸರಬರಾಜು ಆಗದಿರುವುದು ನಾಲ್ಕು ವರ್ಷಗಳಿಂದಲೂ ಸತತವಾಗಿ ಮಳೆ ಕಮ್ಮಿ ಯಾಗಿ ಅಣೆಕಟ್ಟುಗಳಿಗೆ ಪೂರ್ಣಪ್ರಮಾಣದ ನೀರು ಬರದೇ ಇರುವುದೇ ಕಾರಣ.

ಆ) ೧೯೮೮ರ ಮುಂಗಾರಿನಲ್ಲಿ ಅಣೆಕಟ್ಟುಗಳಿಗೆ ಪೂರ್ಣ ಪ್ರಮಾಣ ನೀರು ಬರುವ ಸಂಭವವಿರು ವುದರಿಂದ ಸದರಿ ನಾಲೆಗಳ ಅಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗಬಹುದೆಂದು ಆಶಿಸಲಾಗಿದೆ.

ಅಡಿಕೆ ತೆಂಗಿನಕಾಯಿ ಮತ್ತು ಗೇರು ಬೀಜ ಮಾರಾಟದ ಮೇಲೆ ವಸೂಲಾದ ವಹಿವಾಟ ತೆರಿಗೆ ಬಗ್ಗೆ

೧೩೬೭(೨೭೬೬) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—